# ಸಲ್ಮಾನ್ ನಿಟ್ಟುಸಿರು

ಮುಂಬೈ ಹೈಕೋರ್ಟಿನ ತೀರ್ಪನ್ನು ಕುತೂಹಲದಿಂದ ಕಾಯುತ್ತಿದ್ದ ಬಾಲಿವುಡ್ ನಿಟ್ಟುಸಿರು ಬಿಟ್ಟಿದೆ. 'ಬಾಂದ್ರಾ ಠಾಣೆ ವ್ಯಾಪ್ತಿಯಲ್ಲಿ ಮಧ್ಯರಾತ್ರಿ ನಡೆದ ಅಪಘಾತದಲ್ಲಿ ಸಲ್ಮಾನ್ ಖಾನ್ ತಪ್ಪಿತಸ್ಥ ಎಂದು ಸಾಬೀತುಪಡಿಸಲು ಪ್ರಾಸಿಕ್ಯೂಶನ್ ವಿಫಲವಾಗಿದೆ' ಎಂದು ತೀರ್ಪು ಬಂದಿದೆ. ಕಳೆದ 13 ವರ್ಷಗಳಿಂದ ಈ ಮೊಕದ್ದಮೆ ನಡೆಯುತ್ತಲೇ ಇತ್ತು. ಎಂಟು ತಿಂಗಳ ಹಿಂದೆ ಟ್ರಯಲ್ ಕೋರ್ಟ್, 'ಸಲ್ಮಾನ್ ತಪ್ಪಿತಸ್ಥ' ಎಂದು ತೀರ್ಪು ನೀಡಿ ಐದು ವರ್ಷಗಳ ಜೈಲು ಶಿಕ್ಷೆ ಪ್ರಕಟಿಸಿತ್ತು. ತೀರ್ಪು ಪ್ರಕಟವಾದ ಕ್ಷಣಮಾತ್ರದಲ್ಲಿ ಅದರ ಪ್ರತಿ ಸಲ್ಮಾನನ ವಕೀಲರ ಕೈಗೆ ಸಿಕ್ಕು, ರಾತೋರಾತ್ರಿ ಇನ್ನೊಬ್ಬ ನ್ಯಾಯಾಧೀಶರು ಜಾಮೀನು ಕೊಟ್ಟಿದ್ದರು. ಬಳಿಕ ಸಲ್ಮಾನ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ ಯಾವ ವಕೀಲರು ಏನು ಭರವಸೆ ಕೊಟ್ಟರೂ, ಹೈಕೋರ್ಟ್ ತೀರ್ಪಿನ ಕುರಿತ ಆತಂಕ ಸಲ್ಮಾನ್‌ಗೆ ಇದ್ದೇ ಇತ್ತು. ಈಗ ಬಾಲಿವುಡ್‌ನಲ್ಲಿ ಸಂಭ್ರಮ. ಏಕೆಂದರೆ ಸಲ್ಮಾನ್ ಚಿನ್ನದ ಮೊಟ್ಟೆಯಿಡುವ ಕೋಳಿ. ಬಾಲಿವುಡ್ ಸರಿಸುಮಾರು 500 ಕೋಟಿ ರೂಪಾಯಿ ಬಂಡವಾಳವನ್ನು ಆತನ ಮೇಲೆ ಹೂಡಿ ಕುಳಿತಿದೆ. ಸಲ್ಮಾನ್ ಜೈಲಿಗೆ ಹೋಗಿದ್ದರೆ ಆ ನಿರ್ಮಾಪಕರ ಸ್ಥಿತಿಯೂ ಜೈಲುಪಾಲಾದಂತೆಯೇ ಆಗುತ್ತಿತ್ತು.

ಹಾಗೆಂದು ಹೈಕೋರ್ಟ್ ತೀರ್ಪನ್ನು ಗಮನವಿಟ್ಟು ಓದಿದರೆ ಸಲ್ಮಾನ್ ನಿರ್ದೋಷಿ ಎಂದು ಎಲ್ಲೂ ಅನಿಸುತ್ತಿಲ್ಲ. 'ಪೊಲೀಸರ ತನಿಖೆಯ ವಿಧಾನವೇ ತಪ್ಪಾಗಿದೆ. ಸರಣಿ ಸಾಕ್ಷ್ಯಗಳಿಗೆ ಪೂರಕವೆಂಬಂತೆ ಜೈವಿಕ ಸಾಕ್ಷ್ಯ ಸಂಗ್ರಹ ಆಗಿಲ್ಲ. ಆರೋಪಪಟ್ಟಿಯಲ್ಲಿ ಪೊಲೀಸರು ಹಲವು ಸಡಿಲ ಕೊನೆಗಳನ್ನು ಬಿಟ್ಟಿದ್ದಾರೆ. ಅದೂ ಆರೋಪಿಗೆ ಅನುಕೂಲವಾಗಲಿ ಎಂಬಂತೆಯೇ ಇದೆ' ಎಂದು ಹೈಕೋರ್ಟ್ ನೀಡಿರುವ ತೀರ್ಪನ್ನು ಓದಿದರೆ, ಯಾರಿಗಾದರೂ ಸಲ್ಮಾನ್ ನಿರ್ದೋಷಿ




ಎನ್ನಲು ಸಾಧ್ಯವೆ? ಹಾಗೆಂದು ಕೋರ್ಟಿಗೆ ಅದೂ ಗೊತ್ತಿಲ್ಲವೆಂದಲ್ಲ. 'ಆಪಾದಿತನ ಸ್ಥಾನಮಾನ ಹಾಗೂ ಹೊರಗಿನ ಜನರು ಏನು ಹೇಳುತ್ತಾರೆಂಬುದು ಕೋರ್ಟಿಗೆ ಮುಖ್ಯವಲ್ಲ. ಕೋರ್ಟಿಗೆ ಬೇಕಾದದ್ದು ಪ್ರಬಲ ಸಾಕ್ಷ್ಯ. ಬರೇ ಬಲವಾದ ಸಂಶಯ ಮತ್ತು ಸಂದರ್ಭ ಆಧಾರಿತ ಸಾಕ್ಷ್ಯಗಳು ಒಬ್ಬ ವ್ಯಕ್ತಿಯನ್ನು ಅಪರಾಧಿ ಎನ್ನಲು ಸಾಕಾಗದು' ಎಂದಿದ್ದಾರೆ ನ್ಯಾಯಾಧೀಶರು.

'ಮಧ್ಯರಾತ್ರಿ ರೈನ್ ಬಾರ್‌ನಲ್ಲಿ ಸ್ನೇಹಿತರ ಜತೆ ಕಂಠಪೂರ್ತಿ ಕುಡಿದ ಸಲ್ಮಾನ್ ಅಡ್ಡಾದಿಡ್ಡಿ ಕಾರು ಚಲಾಯಿಸಿದ. ನಾನು ಬುದ್ಧಿ ಹೇಳಿದರೂ ಕೇಳಿಸಿಕೊಳ್ಳಲಿಲ್ಲ. ಕಾರು ಫುಟ್‌ಪಾತಿಗೆ ನುಗ್ಗಿ ಒಬ್ಬ ಸತ್ತು, ನಾಲ್ವರು ಗಾಯಗೊಂಡರು' ಎಂದು ನ್ಯಾಯಾಧೀಶರ ಮುಂದೆ ನೇರ ಸಾಕ್ಷ್ಯ ನೀಡಿದ್ದು ಸಲ್ಮಾನ್‌ಗೆ ಪೊಲೀಸರು ನಿಯೋಜಿಸಿದ್ದ ಅಂಗರಕ್ಷಕ, ಕಾರಿನಲ್ಲಿದ್ದ ರವೀಂದ್ರ ಪಾಟೀಲ್. 'ಈತನ ಹೇಳಿಕೆ ನಂಬಲರ್ಹವಲ್ಲ' ಎಂದಿದೆ ಹೈಕೋರ್ಟ್. 'ಘಟನೆ ನಡೆದದ್ದು ಸೆಪ್ಟೆಂಬರ್ 28ರಂದು ರಾತ್ರಿ. ಮರುದಿನ ಸಲ್ಲಿಸಿದ ಎಫ್‌ಐಆರ್‌ನಲ್ಲಿ ರವೀಂದ್ರ ಪಾಟೀಲ್ ಈ ವಿಷಯ ನಮೂದಿಸಿಲ್ಲ. ಅಕ್ಟೋಬರ್ 1ರಂದು ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಿದ ಹೇಳಿಕೆಯಲ್ಲಿ ಹೀಗೆ ಹೇಳಿದ್ದಾನೆ. ಹೀಗೆ ಹೇಳಿಕೆ ಬದಲಾಯಿಸಿದ್ದು ನಂಬಿಕೆಗೆ ಅರ್ಹವಲ್ಲ' ಎಂದಿದ್ದಾರೆ ನ್ಯಾಯಾಧೀಶರು. '2002ರಲ್ಲಿ ಹೇಳಿಕೆ ನೀಡಿರುವ ಪಾಟೀಲ್ 2007ರಲ್ಲಿ ತೀರಿಕೊಂಡಿದ್ದಾನೆ. ನಾವು ಪಾಟೀಸವಾಲು ಮಾಡಲು ಅವಕಾಶವೇ ಸಿಕ್ಕಿಲ್ಲ. ಪಾಟೀಸವಾಲೇ ಇಲ್ಲದ ಆತನ ಹೇಳಿಕೆಯನ್ನು ಪ್ರಬಲ ಸಾಕ್ಷ್ಯ ಎಂದು ಪರಿಗಣಿಸಿದ್ದು ಸರಿಯಲ್ಲ' ಎನ್ನುವುದು ಸಲ್ಮಾನ್ ವಕೀಲರ ವಾದ. ಒಟ್ಟಾರೆ ರೋಗಿ ಬಯಸಿದ್ದೂ ಬಿರಿಯಾನಿ; ವೈದ್ಯರು ತಿನ್ನಲು ಹೇಳಿದ್ದೂ ಬಿರಿಯಾನಿಯೇ!

ಸಲ್ಮಾನ್ ಅಭಿಮಾನಿಗಳಿಗೆ ಎಷ್ಟೇ ಖುಷಿಯಾಗಿರಲಿ, ಟ್ವಿಟ್ಟರಿಗರಿಗೆ ಮಾತ್ರ ಖುಷಿಯಾಗಿಲ್ಲ. ತೀರ್ಪಿನ ಬಗ್ಗೆ ಬಗೆಬಗೆಯ ಕಾಮೆಂಟು! 'ನನಗೆ ಮೊದಲೇ ಗೊತ್ತಿತ್ತು– ಕುಡಿದದ್ದು ಸಲ್ಮಾನನ ಕಾರು' ಎಂದೊಬ್ಬ ಕುಟುಕಿದರೆ, ಇನ್ನೊಬ್ಬ 'ಸಲ್ಮಾನ್ ಭಾರೀ ಚಾಲಾಕಿ ಡ್ರೈವರ್' ಎಂದಿದ್ದಾನೆ. ಮಾನವ ಹಕ್ಕುಗಳ ದಿನಾಚರಣೆಯಂದೇ ತೀರ್ಪು ನೀಡಿದ್ದರ ಬಗ್ಗೆ ಇನ್ನೊಬ್ಬ ವ್ಯಂಗ್ಯವಾಡಿದ್ದಾನೆ. ಮತ್ತೊಬ್ಬ, 'ಕೃಷ್ಣಮೃಗಗಳ ಶಿಕಾರಿ ಕೇಸ್‌ನಲ್ಲೂ ಆ ಪ್ರಾಣಿಗಳ ಸಾಕ್ಷ್ಯ ನಂಬಲಾಗದು' ಎಂದು ಕೋರ್ಟಿನ ಮುಂದೆ ಬಾಕಿ ಇರುವ ಇನ್ನೊಂದು ಕೇಸನ್ನು ನೆನಪಿಸಿದ್ದಾನೆ.

ಸಲ್ಮಾನ್ ಅದೃಷ್ಟವಂತ ಎನ್ನುವುದಂತೂ ಖಂಡಿತ. ಈ ವರ್ಷ ಆತನ ಎರಡೂ ಸಿನಿಮಾಗಳು 300 ಕೋಟಿ ರೂಪಾಯಿ ಬಾಚಿಕೊಂಡಿವೆ. ಆದಿತ್ಯ ಚೋಪ್ರಾನ 'ಸುಲ್ತಾನ್' ಮತ್ತು 'ಪಾರ್ಟ್‌ನರ್–2' ಚಿತ್ರಗಳ ಶೂಟಿಂಗ್ ನಡೆದಿದೆ. ದಭಾಂಗ್–3, ಎಂಟ್ರಿ ಮೆ ನೋ ಎಂಟ್ರಿ ಸಿನಿಮಾಗಳಿಗೆ ಸಹಿ ಆಗಿದೆ. ಈಮಧ್ಯೆ ಮಹೇಶ್ ಮಂಜ್ರೇಕರ್ ಮತ್ತು ಅತುಲ್ ಅಗ್ನಿಹೋತ್ರಿ ನಿರ್ದೇಶನದ ಎರಡು ಚಿತ್ರಗಳೂ ರೆಡಿಯಾಗುತ್ತಿವೆ. 2018ರವರೆಗೆ ಸಲ್ಮಾನ್‌ಗೆ ಪುರುಸೊತ್ತೇ ಇಲ್ಲ. ಸದ್ಯ ಬಾಲಿವುಡ್‌ನಲ್ಲಿ ಚಿತ್ರವೊಂದಕ್ಕೆ ಅತ್ಯಧಿಕ ಸಂಭಾವನೆ (60 ಕೋಟಿ ರೂಪಾಯಿ) ಪಡೆಯುತ್ತಿರುವ ನಟ ಸಲ್ಮಾನ್. ಜತೆಗೆ ಚಿತ್ರದ ಲಾಭದಲ್ಲೂ ದೊಡ್ಡ ಪಾಲು. 'ಇಷ್ಟೊಂದು ಪ್ರಭಾವಶಾಲಿ ನಟನ ವಿರುದ್ಧದ ಮೊಕದ್ದಮೆ ಇತ್ಯರ್ಥವಾಗಲು 13 ವರ್ಷ ತಗುಲಿದ್ದೇ ದೊಡ್ಡ ತಪ್ಪು' ಎನ್ನಬಹುದೆ?

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65